Statement showing the names, designation and date of appointment local people in M/s. Hindustan Latex Ltd., Kanagala.

Sl. No.	Name	Designation	Date of appointment	remarks
1.	Sri C. B. Pawar	Security Guard	6-4-1985	All from Belgaum Distict
2.	Sri C.A. Jadge	,,	12-10-1985	
3.	Sri Maruti Kamble	,,	25-10-1985	
4.	Sri Rajendra Kollolli	Junior Clerk	21-2-1986	
5.	Smt. Putalava B. Holar	Sweeper	23-4-1986	
6.	Sri Malagowda Patil	Driver	10-6-1986	
7.	Sri Kallappa Imagouda-navar	Messenger	15-7-1986	
8.	Sri A.B. Gulle	Driver	6-8-1986	
9.	Sri B.I. Gadasi	Peon	25-8-1986	
10.	Sri Tayappa Kamble	Security Guard	29-8-1986	
11.	Sri Ramachandra A. Ayachit	Junior Stenographer	5-9-1986	

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನನಗೆ ಉತ್ತರ ಬಂದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಇದು ಲೇಬರ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು ಪ್ರಶ್ನೆಯನ್ನು ಈ ರೀತಿ ಕೇಳಿದ್ದಾರೆ.

"Whether any complaints have been received by the Government stating that preference was not given to the people of Belgaum District for appointment in Hindustan Latex Factory at Belgaum :"

This belongs to the Labour Minister and I have also written to you.

ಸಭಾಪತಿಯವರು.—ಉದಾಸಿಯವರ ಪ್ರಶ್ನೆ 'ಸಿ' ಗ್ರೂಪಿಗೆ ಟ್ರಾನ್ಸ್‌ಫರ್ ಆಗಿದೆ.

ಬೇಲೂರು ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ.

೧೧೧೯. ಶ್ರೀ ಹೆಚ್. ಕೆ. ಕುಮಾರ ಸ್ವಾಮಿ. (ಬೇಲೂರು).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇಲೂರು ತಾಲ್ಲೂಕಿನ ಬಕ್ಕೋಡು ಹೋಬಳಿ ಕಸಬ ಹೋಬಳಿ, ಗೆಂಡೆಹಳ್ಳಿ ಪ್ರದೇಶಗಳಲ್ಲಿ ಕಾಡಾನೆಗಳ ಹಾವಳಿ ಇರುವುದು ಸರ್ಕಾರದವರೆ ಗಮನಕ್ಕೆ ಬಂದಿದೆಯೇ?

ಆ) ಈ ಪ್ರದೇಶಗಳಲ್ಲಿ ಉಂಟಾಗಿರುವ ಪ್ರಾಣಹಾನಿ ಮತ್ತು ಬೆಳೆಹಾನಿಗೆ ಸರ್ಕಾರದವರಿಂದ ಕೊಟ್ಟಿರುವ ಪರಿಹಾರ ಏನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ, ಹಾಗೂ ಭೂ ವಿಜ್ಞಾನ ಮಂತ್ರಿಗಳು):— ಅ) ಹೌದು.

ಆ) ಮಾನವ ಪ್ರಾಣ ಹಾನಿ ಆದ ಬಗ್ಗೆ ಕಳೆದ ಮೂರು ವರ್ಷಗಳಲ್ಲಿ ಯಾವುದೇ ವರದಿಯಿಲ್ಲ. ಬೆಳೆನಷ್ಟ ಹಾಗೂ ಜಾನುವಾರು ನಷ್ಟದ ಬಗ್ಗೆ ಸಂತ್ರಸ್ತರಿಗೆ ಒಟ್ಟು ರೂಪಾಯಿ ೨೯,೦೫೦-೦೦ ಪರಿಹಾರಧನವನ್ನು ೧೯೮೪-೮೫ನೇ ಸಾಲಿನಿಂದ ೧೯೮೬-೮೭ನೇ ಸಾಲಿನವರೆಗೆ ಈ ಕೆಳಕಂಡಂತೆ ನೀಡಲಾಗಿದೆ.

ಗ್ರಾಮಗಳು	ಬೆಳೆಹಾನಿ ಪ್ರಕರಣಗಳು.	ಜಾನುವಾರು ಪ್ರಕರಣಗಳು	ಪರಿಹಾರ
ಬೇಲೂರು ಹೋಬಳಿ	...	೨	೧,೦೦೦-೦೦
	೧	..	೫೦೦-೦೦
ಬಿಕ್ಕೋಡು ಹೋಬಳಿ	೩೦	...	೧೯,೦೨೫-೦೦
ಹಳೇಬೀಡು ಹೋಬಳಿ	೬	...	೨,೯೦೦-೦೦
	...	೧೧	೫,೨೨೫-೦೦
ಮಾದಿಹಳ್ಳಿ ಗ್ರಾಮ	...	೩	೧,೪೦೦-೦೦
		ಒಟ್ಟು ಮೊತ್ತ	೨೯,೦೫೦-೦೦

ಶ್ರೀ ಹೆಚ್. ಕೆ. ಕುಮಾರಸ್ವಾಮಿ.— ಮಾನ್ಯ ಅಧ್ಯಕ್ಷರೆ, (ಅ) ಪ್ರಶ್ನೆಯಲ್ಲಿ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ನಿರ್ದಿಷ್ಟವಾದ ಪ್ರಕರಣದಲ್ಲಿ ಅಂದರೆ ಬಿಕ್ಕೋಡು ಹೋಬಳಿಯ ನಿರಮನಹಳ್ಳಿಯ ತಿಮ್ಮೇಗೌಡರ ಜಮೀನಿನಲ್ಲಿ ಒಂದು ಎಕರೆಯಷ್ಟಲ್ಲಿ ಕಬ್ಬಿನ ಬೆಳೆಗೆ ತುಂಬ ನಷ್ಟವಾಗಿರುತ್ತದೆ. ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ.

ದಯಮಾಡಿ ಬೆಳೆ ಹಾನಿಗೆ ಸರಿಯಾದ ಪರಿಹಾರವನ್ನು ಕೊಡಬೇಕೆಂದು ನಾನು ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ಎಸ್. ದೇಶಮುಖ್.—ಇದು ನನ್ನ ಗಮನಕ್ಕೆ ಬಂದಿಲ್ಲ, ಅವರು ವಿವರಗಳನ್ನು ಕೊಟ್ಟರೆ, ಕ್ರಮ ತೆಗೆದುಕೊಳ್ಳುತ್ತೇನೆ.

ಪಶುವೈದ್ಯರ ಹುದ್ದೆಗಳನ್ನು ತುಂಬುವುದು.

೧೧೧೦(ಡಿ). ಶ್ರೀ ಬಿ. ಎಸ್. ಆಚಾರ್, (ಬೈಂದೂರು).—ಮಾನ್ಯ ರೇಷ್ಮೆ, ವ್ಯವಸಾಯ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ಗ್ರಾಮೀಣ ಪಶುವೈದ್ಯಾಲಯಗಳಲ್ಲಿ ಪಶುವೈದ್ಯರ ಹುದ್ದೆ ಖಾಲಿ ಇವೆ, ಹಾಗೂ ಎಷ್ಟು ವರ್ಷಗಳಿಂದ ಖಾಲಿ ಇದೆ?

ಆ) ಖಾಲಿ ಜಾಗ ತುಂಬಲು ಸರಕಾರದ ಕಾರ್ಯಕ್ರಮವೇನು?

ಇ) ಹೊಸ ಪಶುಚಿಕಿತ್ಸಾಲಯ ಆರಂಭಿಸಲು ಸರಕಾರದವರು ಕೈಗೊಂಡ ಕ್ರಮವೇನು ?